**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 02.03.2024
ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದ

ನಾನು ಈ ದಾವೆಯಲ್ಲಿ ವಾದಿಯಿಂದ ಅಧಿಕಾರ ಪತ್ರ ಪಡೆದ ವ್ಯಕ್ತಿಯಾಗಿದ್ದು, ವಾದಿ ಪರ ನನ್ನ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಎಂದು, ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳು ಸತ್ಯ ಇರುತ್ತವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದಾಗಿರುತ್ತದೆ ಎಂದು ನುಡಿದಿರುತ್ತಾರೆ.

ನಾನು ದಿಃ 21.10.2019 ಹಾಗೂ ದಿಃ 26.05.2022 ರ ಕ್ರಯ ಪತ್ರಗಳು, ದಿಃ 03.12.2022 ರ ನೋಟೀಸ್ ನ ಕಛೇರಿ ಪ್ರತಿ, ಎರಡು ಅಂಚೆ ರಶೀದಿಗಳು, ಎರಡು ಅಂಚೆ ಸ್ವೀಕೃತಿ ಪತ್ರಗಳು, ಒಂದು ಮುಚ್ಚಿದ ಅಂಚೆ ಲಕೋಟೆ ಮತ್ತು ನೋಟರಿಕರಿಸಿದ ಜಿ.ಪಿ.ಎ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ ನಿಪಿ.9 ಎಂದು ಗುರುತಿಸಲಾಯಿತು.

ನಿಪಿ.2 ರಲ್ಲಿರುವ ಜಾಕಿರ್ ಷರೀಫ್ ಮತ್ತು ನೂರ್ ಫಾತಿಮ ರವರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವರ ಸಹಿಗಳನ್ನು ನೋಡಿ ಗುರುತಿಸಿದ್ದು ಜಾಕಿರ್ ಷರೀಫ್ ರವರ ಸಹಿಯನ್ನು ನಿಪಿ.2-ಎ ಎಂದು ಹಾಗೂ ನೂರ್ ಫಾತಿಮ ರವರ ಸಹಿಯನ್ನು ನಿಪಿ.2-ಬಿ ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿಗಳ ಪರ

ಪ್ರತಿವಾದಿಗಳ ವಿರುದ್ದ ಏಕತರ್ಫಿ ಆದೇಶವಾಗಿದ್ದು ಅವರ ಪರ ಸಾಕ್ಷಿಯ ಪಾಟಿ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.